ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

ಓ.ಎಸ್.114/2024

ಸಾಕ್ಷಿಯನ್ನು ದಿಃ **20.02.2026** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ 1ನೇ ಪ್ರತಿವಾದಿ ಪರಃ ಶ್ರೀ. BS **ವಕೀಲರಿಂದ**:

ಈ ದಾವೆಯಲ್ಲಿ ವಾದಿಯರಾದ ಸಣ್ಣಕಾಳನಾಯಕ, ಸಣ್ಣನಾಯಕ ಹಾಗೂ ಪ್ರತಿವಾದಿಯರಾದ ಸವೀಂದ್ರ ಆರ್.ಕೆ ಮತ್ತು ಮಹದೇವನಾಯ ಆರ್.ಕೆ ಮಾತ್ರ ಪಕ್ಷಗಾರರು ಎಂದರೆ ಸರಿ. ನನ್ನ ಹೆಸರು ವಾದಪತ್ರದಲ್ಲಿ ಇಲ್ಲ. ನಾನು GPA ಆಗಿದ್ದೇನೆ. GPA ಅನ್ನು ನನ್ನ ತಂದೆ ನನಗೆ ಕೊಟ್ಟಿದ್ದಾರೆ. ನನ್ನ ತಂದೆಗೆ ಆರೋಗ್ಯ ಸಮಸ್ಯೆ ಇರುವ ಕಾರಣ ನನಗೆ GPA ಕೊಟ್ಟಿದ್ದಾರೆ . ನಿಪಿ–20 ಅನ್ನು ನಾನೇ ಹಾಜರುಪಡಿಸಿದ್ದೇನೆ. ನನ್ನ ತಂದೆಗೆ ಪೈಲ್ಸ್ ಆಪರೇಷನ್ ಆಗಿದೆ, ಕಣ್ಣು ಕಾಣುವುದಿಲ್ಲ ಮತ್ತು ಕಿವಿ ಕೇಳುವುದಿಲ್ಲ ಎಂದು ನಿಪಿ–20ರ GPA ಅಲ್ಲಿ ಎಲ್ಲಿ ಬರೆಯಲಾಗಿದೆ ಎಂದರೆ ಆ ಬಗ್ಗೆ ಬರೆದಿಲ್ಲ. ಅದರಲ್ಲಿ ಆ ರೀತಿ ಬರೆಯದೇ ಇರುವ ಕಾರಣ ನಾನು ನ್ಯಾಯಾಲಯದ ಮುಂದೆ ಹೇಳಿರುವ ಹೇಳಿಕೆಗೂ ನಿಪಿ–20 ರಲ್ಲಿ ಬರೆದ ವಿಷಯಗಳಿಗೂ ವ್ಯತ್ಯಾಸ ಇದೆ ಎಂದರೆ ಇಲ್ಲ. ಯಾವ ಆಧಾರದ ಮೇಲೆ ವ್ಯತಾಸ ಇಲ್ಲ ಎಂದು ಹೇಳುತ್ತಿದ್ದಿರಿ ಎಂದರೆ ಸಾಕ್ಷಿ ಸರಿಯಾಗಿ ಉತ್ತರಿಸುವುದಿಲ್ಲ. ನಿಪಿ–20ರ ಪ್ಯಾರಾ ನಂ.3 ರಲ್ಲಿ ನನ್ನ ತಂದೆಗೆ ವಯಸ್ಸಾಗಿದ್ದು ಅನಕ್ಷರಸ್ಥರಾದ ಕಾರಣ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗದೇ ಇರುವ ಕಾರಣದಿಂದಾಗಿ ನನಗೆ GPA ಕೊಟ್ಟಿದ್ದಾರೆ ಎಂದು ಬರೆದಿದೆ ಎಂದರೆ ಸರಿ. ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ನಿಜಾಂಶ ತಿಳಿಯುತ್ತದೆ ಎಂದು ಸುಳ್ಳು GPA ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಯ ಅನಾರೋಗ್ಯದ ಬಗ್ಗೆ ಮುಂದಿನ ದಿನದಲ್ಲಿ ದಾಖಲೆಯನ್ನು ಹಾಜರುಪಡಿಸುವುದಾಗಿ ನಾನು ಹೇಳಿದ್ದು, ಈ ದಿನ ಹಾಜರುಪಡಿಸಿಲ್ಲ ಕಾರಣ 2 ವರ್ಷಗಳಾಗಿರುವುದರಿಂದ ದಾಖಲೆ ಲಭ್ಯವಿಲ್ಲ. ನನ್ನ ತಂದೆ ಈಗ ಆರೋಗ್ಯವಾಗಿದ್ದಾರೆ ಎಂದರೆ ಇಲ್ಲ. ನನ್ನ ತಂದೆ ಆರೋಗ್ಯವಾಗಿದ್ದರೂ ಕೂಡ ಸುಳ್ಳು ಹೇಳಿರುವ ಕಾರಣ ದಾಖಲೆ ಹಾಜರುಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ ಶ್ರೇಣಿಯ ದಾಖಲೆಗಳನ್ನು ತೋರಿಸಲಾಗಿ ಯಾವ ದಾಖಲೆಯಲ್ಲಿ ಸಮವಾಗಿ ವಿಭಾಗ ಆಗಿಲ್ಲ ಎಂದು ಬರೆದಿದೆ ಎಂದರೆ ಯಾವುದೇ ದಾಖಲೆಯಲ್ಲಿ ಆ ರೀತಿ ಬರೆದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲದೇ ಇರುವ ಕಾರಣ ಈ ದಾವೆಯ ಸಂಪೂರ್ಣ ವಾಸ್ತವಾಂಶ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿಯಾಗಿದ್ದು, ನನ್ನ ತಾತನ 3 ಮಕ್ಕಳಿಗೆ ಸಮಭಾಗ

ಬರಬೇಕಾಗಿದೆ. ನನ್ನ ತಾತನ ಪಿತ್ರಾರ್ಜಿತ ಆಸ್ತಿಗಳಲ್ಲಿ ವಿಭಾಗ ಆಗಿಲ್ಲ ಎಂದುತೋರಿಸಲು ಏನು ದಾಖಲೆ ಕೊಟ್ಟಿದ್ದಿರಿ ಎಂದರೆ RTC ಕೊಟ್ಟಿದ್ದೇನೆ. ನನ್ನ ತಾತನ ಹೆಸರು ಕಾಳನಾಯಕ. ನಿಪಿ–8 ರ ದಾಖಲೆಯನ್ನು ನಾನು ಹಾಜುರುಪಡಿಸಿದ್ದು, ಅದು ಸುಳ್ಳು ದಾಖಲೆ ಆಗಿದ್ದು ವಿಭಜನೆ ಆಗಿಲ್ಲ. ಸಮಭಾಗ ಆಗದೇ ಇರುವ ಕಾರಣ ಸದರಿ ದಾಖಲೆ ಸುಳ್ಳು ಎಂದು ಹೇಳುತ್ತಿದ್ದೇನೆ. ಸಮಭಾಗ ಆಗಿಲ್ಲ ಎಂದು ಯಾವಾಗ ಗೊತ್ತಾಯಿತು ಎಂದರೆ 2 ವರ್ಷಗಳ ಹಿಂದೆ ನನ್ನ ದೊಡ್ಡಪ್ಪ ತೀರಿಹೋದಾಗ ಗೊತ್ತಾಯಿತು. ವಾದ ಪತ್ರದಲ್ಲಿ ಸಮಭಾಗ ಆಗಿಲ್ಲ, ಭಾಗ ಬೇಕು ಎಂದು ಬರೆಸಿದ್ದೇನೆ. ಭಾಗ ಆಗಿಲ್ಲ ಸೃಷ್ಟಿ ಮಾಡಿಸಿಕೊಂಡಿದ್ದಾರೆ ಎಂದು ವಾದ ಪತ್ರದ 4ನೇ ಪ್ಯಾರಾದಲ್ಲಿ ಬರೆಸಿದ್ದೇವೆ. ನಿಪಿ–19 ಅನ್ನು ನಾವೇ ಹಾಜರುಪಡಿಸಿದ್ದೇವೆ ಎಂದರೆ ಇಲ್ಲ. ನಿಪಿ–19 ಅನ್ನು ಕೈ ಬರಹದಲ್ಲಿದೆ ಎಂದು ಹಾಜರುಪಡಿಸಿದ್ದೇನೆ. ನಿಪಿ–19 ದಾವೆ ದಾಖಲಿಸುವ ವೇಳೆಗೆ 28 ವರ್ಷಗಳ ಹಿಂದಿನ ದಾಖಲೆ ಎಂದರೆ ಸರಿ. ನನ್ನ ತಂದೆಯ ಕುಟುಂಬದಲ್ಲಿ 1996–97ನೇ ಸಾಲಿನಲ್ಲಿ ವಿಭಾಗ ಆಗಿದೆ ಎಂದರೆ ಸರಿಯಲ್ಲ. 1996–97ನೇ ಸಾಲಿನಲ್ಲಿ ನನ್ನ ತಂದೆಯ ಕುಟುಂಬದಲ್ಲಿ ವಿಭಾಗ ಆದ ವಿಚಾರ ವಾದಿಯರಿಗೆ ಚೆನ್ನಾಗಿ ಗೊತ್ತಿದ್ದರೂ ಸಹ 2ನೇ ವಾದಿ ನ್ಯಾಯಾಲಯದ ಮುಂದೆ ವಿಭಾಗ ಆದ ಬಗ್ಗೆ ಹೇಳಿಕೆ ಕೊಟ್ಟಿದ್ದರೂ ಸಹ ನಾನು ವಿಭಾಗ ಆಗಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಕುಟುಂಬದಲ್ಲಿ ಈಗಾಗಲೇ ವಿಭಾಗ ಆಗಿರುವ ಕಾರಣ ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಹಿಸ್ಸೆಯ ಹಕ್ಕು ಇಲ್ಲಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಭಾಗ ಇಲ್ಲದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. 2024ರಲ್ಲಿ ನಮಗೆ ಗೊತ್ತಾದ ಕಾರಣ ಈ ದಾವೆ ಹಾಕಿದ್ದೇವೆ. ಈ ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಸಹ ಸುಳ್ಳು ವ್ಯಾಜ್ಯ ಕಾರಣ ಸೃಷ್ಟಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2ನೇ ಪ್ರತಿವಾದಿಯರ ಪರಃ

2ನೇ ಪ್ರತಿವಾದಿ ಏಕಪಕ್ಷಿಯರಾಗಿದ್ದು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.